# 4

# ಪ್ರಶ್ನೆ:

# “ರಕ್ಷಿಸಲ್ಪಡಲಿಕ್ಕೆ ನಾವು ಪರಿಶುದಾತ್ಮನಿಂದ ನಡಿಸಲ್ಪಡ ಬೇಕಾಗಿದ್ದರೆ, ಇಂದು ನಾವು ಪರಿಶುದ್ಧಾತ್ಮನಿಂದ ಹೇಗೆ ಮಾರ್ಗದರ್ಶನ ಪಡೆದುಕೊಳ್ಳುವೆವು?”

## ಉತ್ತರ:

ಇತ್ತೀಚೆಗಿನ ವರ್ಷಗಳಲ್ಲಿ, ಪರಿಶುದ್ಧಾತ್ಮನಲ್ಲಿ ಆಸಕ್ತಿಯ ಪುನರುಜ್ಜೀವನ ವಾಗಿದ್ದು, ಚಾರಿಸ್ಮಾಟಿಕ್ ಚಳವಳಿಯನ್ನು ಉತ್ಪಾದಿಸಿರುವುದು. ಈ ಚಳವಳಿಯ ಪ್ರಮುಖ ಗುಣಲಕ್ಷಣವು ಇದರಲ್ಲಿ ಒಳಗೊಂಡಿರುವವರು ಪರಿಶುದ್ಧಾತ್ಮನ ಬಲದಿಂದ ವಾಣಿಗಳನ್ನಾಡುವೆವೆಂದು ಹೇಳಿಕೊಳ್ಳುತ್ತಿರುವರು, ಅವರು ಹಾಗೆ ಮಾಡುವರೇ ಅಥವಾ ಮಾಡುವದಿಲ್ಲವೋ? ಅದು ಒಂದು ಮಹತ್ವದ ಪ್ರಶ್ನೆ. ಆದರೆ ಪರಿಶುದ್ಧಾತ್ಮನ ಬಗ್ಗೆ ಇನ್ನೊಂದು ಪ್ರಶ್ನೆಯು ಇನ್ನೂ ಹೆಚ್ಚು ಮಹತ್ವದ ಪ್ರಶ್ನೆಯಾಗಿದೆ: ನಮ್ಮ ರಕ್ಷಣೆಯಲ್ಲಿ ಪರಿಶುದ್ಧಾತ್ಮನು ಯಾವ ಭಾಗ ಮಾಡುವನು?

ನಾವು ರಕ್ಷಿಸಲ್ಪಡುವದರೊಂದಿಗೆ ಪರಿಶುದ್ಧಾತ್ಮನು ಯಾವುದನ್ನೋ ಮಾಡ ಬೇಕಾಗಿ ರುವುದು. ನಾವು ಆತ್ಮನಿಂದ ಹೊಸದಾಗಿ ಹುಟ್ಟಿರುವೆವು (ಯೋಹಾನ 3:5); ನಾವು ಆತ್ಮನಲ್ಲಿ ನೀತಿವಂತರೆಂದು ಎಣಿಸಲ್ಪಟ್ಟಿರುವೆವು (1 ಕೊರಿಂಥ 6:11); ಮತ್ತು ಪರಿಶುದ್ಧಾ ತ್ಮನ ನವೀಕರಣದಿಂದ ನಾವು ರಕ್ಷಿಸಲ್ಪಟ್ಟಿರುವೆವು (ತೀತ 3:5). ಇಂದು ನೀವು ರಕ್ಷಿಸಲ್ಪಡಬೇಕಾದರೆ, ಪರಿಶುದ್ಧಾತ್ಮನಿಂದ ನೀವು ರಕ್ಷಿಸಲ್ಪಡತಕ್ಕದ್ದು .

ಪರಿಶುದ್ಧಾತ್ಮನು ಹೇಗೆ ರಕ್ಷಿಸುತ್ತಾನೆ? ಉತ್ತರವು ರೋಮಾಪುರ 8:14ರಲ್ಲಿ ಕಂಡು ಬರುತ್ತದೆ: “ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು.” *ಆತ್ಮನಿಂದ ರಕ್ಷಿಸಲ್ಪಡಬೇಕಾದರೆ, ನೀವು ಆತ್ಮನಿಂದ ನಡಿಸಲ್ಪಡಬೇಕು ಎಂಬುದನ್ನು ದೃಢಪಡಿಸುತ್ತೇನೆ!* ಆಗ ಈ ಪ್ರಶ್ನೆಯು ಬರುತ್ತದೆ: “ನಾವು ರಕ್ಷಿಸಲ್ಪಡಲು ಪರಿಶುದ್ಧಾತ್ಮನಿಂದ ನಡಿಸಲ್ಪಡತಕ್ಕದ್ದಾಗಿದ್ದರೆ, ಇಂದು ನಾವು ಪರಿಶುದ್ಧಾತ್ಮನಿಂದ ಹೇಗೆ ಮಾರ್ಗದರ್ಶನ ಹೊಂದತಕ್ಕದ್ದು?” ಮೊದಲು, ಪರಿಶುದ್ಧಾತ್ಮನು *ಹೇಗೆ* ನಮ್ಮನ್ನು ನಡಿಸುವನು, ಮತ್ತು ಎರಡನೆಯದು, *ಎಲ್ಲಿಗೆ* ಪರಿಶುದ್ಧಾತ್ಮನು ನಮ್ಮನ್ನು ನಡಿಸುವನು? ಎಂದು ಪ್ರಶ್ನಿಸುವದರಿಂದ ನಾವು ಉತ್ತರವನ್ನು ಕೊಡೋಣ.

# ಪರಿಶುದ್ಧಾತ್ಮನು ನಮ್ಮನ್ನು ಹೇಗೆ ನಡಿಸುವನು?

ಪರಿಶುದ್ಧಾತ್ಮನು ನಮ್ಮನ್ನು ಹೇಗೆ ನಡಿಸುವನು? ಕನಿಷ್ಠ ಪಕ್ಷ ಮೂರು ಸಾಧ್ಯತೆಗಳನ್ನು ಹೇಳಬಹುದು:

**ಅದ್ಭುತಕರವಾದ ಸಾಧನಗಳಿಂದ?**

ಆತ್ಮನು ನಮ್ಮನ್ನು *ನೇರವಾಗಿಯೂ ಅದ್ಭುತಕರವಾಗಿಯೂ* ರಕ್ಷಣೆಯೊಳಗೆ ನಮ್ಮನ್ನು ನಡಿಸುವನೋ? ರಾತ್ರಿಯ ಅಂಧಕಾರದಲ್ಲಿ ಆತನು ನಮ್ಮೊಂದಿಗೆ ಮಾತಾಡುವನೋ? ಆತನು ವಿಶೇಷ ಪ್ರಕಟಣೆಗಳನ್ನು ಕೊಡುವನೋ? ಇಂದು ಜನರು ದೇವದೂತರ ಸಂದರ್ಶನಗಳನ್ನು ಹೊಂದಿಕೊಳ್ಳುವರೋ? "ಚಿಕ್ಕದಾದ, ಶಾಂತವಾದ ಸ್ವರದಲ್ಲಿ" ದೇವರು ಮಾತಾಡುವನೋ?

ಸ್ಪಷ್ಟವಾಗಿ, ದೇವರು ಹಿಂದಿನ ಕಾಲದಲ್ಲಿ ಈ ರೀತಿಯಲ್ಲಿ ಜನರನ್ನು ನಡಿಸಿದ್ದಾನೆ. ಅದು ಮಾತ್ರವೇ ಈ ಯುಗದಲ್ಲಿ ಅದೇ ರೀತಿಯಲ್ಲಿ ಜನರನ್ನು ದೇವರು ನಡಿಸುತ್ತಿರುವನೆಂಬುದನ್ನು ರುಜುವಾತುಪಡಿಸುವದಿಲ್ಲ ಯಾಕೆ? ಯಾಕಂದರೆ, ಭಿನ್ನವಾದ ಕಾಲಗಳಲ್ಲಿ, ಭಿನ್ನವಾದ ರೀತಿಯಲ್ಲಿ ದೇವರು ಜನರೊಂದಿಗೆ ವರ್ತಿಸಿದ್ದಾನೆ (ನೋಡಿರಿ ಇಬ್ರಿಯ 1:1, 2). ಇದಲ್ಲದೇ, ದೇವರು ಹಿಂದೆ ಮಾಡಿದ ಅನೇಕ ಸಂಗತಿಗಳನ್ನು ಪುನರಾವರ್ತಿಸುತ್ತಿರುವದಿಲ್ಲ. ಉದಾಹರಣೆಯಾಗಿ, ವಿಶ್ವವನ್ನು ಆತನು ಸೃಷ್ಟಿಸಿದ್ದನ್ನು, ತನ್ನ ಕುಮಾರನನ್ನು ಆತನು ಕಳುಹಿಸಿದ್ದನ್ನು ಅಥವಾ ಬೈಬಲಿನ ಆತನ ಪ್ರೇರಣೆಯನ್ನು ಪುನರಾವರ್ತಿಸುತ್ತಿರುವದಿಲ್ಲ. ಹೀಗೆ ಪ್ರಶ್ನೆಯು, "ದೇವರು ಏನು ಮಾಡಿದ್ದಾನೆ?" ಇಲ್ಲವೇ "ದೇವರು ಏನು ಮಾಡಬಲ್ಲನು?" ಎಂಬುದಾಗಿರುವದಿಲ್ಲ. ಪ್ರಶ್ನೆಯು, "*ಇಂದು* ದೇವರು ಏನನ್ನು ಮಾಡುತ್ತಿದ್ದಾನೆ?" ಎಂಬುದಾಗಿದೆ.

ಅದ್ಭುತಗಳ ಯುಗವು ದಾಟಿಹೋಯಿತೆಂದು ಬೈಬಲ್ ಬೋಧಿಸುವಾಗ, ದೇವರು ಇಂದು ಜನರನ್ನು ನೇರವಾಗಿ ಇಲ್ಲವೇ ಅದ್ಭುತಕರವಾಗಿ ನಡಿಸುತ್ತಿರುವದಿಲ್ಲವೆಂದು ನಾವು ಸೂಚಿಸುತ್ತೇವೆ. ಅದ್ಭುತಗಳ ದಿನವು ದಾಟಿಹೋಗಿದೆ ಎಂದು ನಾನು ಯಾಕೆ ಹೇಳುತ್ತೇನೆ? ಯಾಕಂದರೆ ಆತ್ಮನಿಂದ ಪ್ರೇರಿತವಾಗಿ ಇದನ್ನು ಮೊದಲು ಪೌಲನು ಹೇಳಿದನು, 1 ಕೊರಿಂಥ 12ರಲ್ಲಿ ಪೌಲನು ಪರಿಶುದ್ಧಾತ್ಮನ ಅದ್ಭುತಗಳ ವರಗಳ ಬಗ್ಗೆ ಮಾತಾಡಿದನು. ಆಮೇಲೆ 1 ಕೊರಿಂಥ 13ರಲ್ಲಿ "ಸಂಪೂರ್ಣವಾದದ್ದು ಬಂದಾಗ" ಈ ಅದ್ಭುತವರಗಳ ಪದ್ಧತಿಯು ಇಲ್ಲದಂತಾಗುವುದು (ವಚನಗಳು 8-10) ಎಂದು ಅವನು ಹೇಳಿದನು. ಅದೇ ನಿಶ್ಚಿತವಾಗಿ ಸಂಭವಿಸಿತೆಂದು ನಾನು ನಂಬುತ್ತೇನೆ. ವಾಣಿಗಳನ್ನಾಡುವ ಸಾಮರ್ಥ್ಯ, ರೋಗಿಗಳನ್ನ ಗುಣಪಡಿಸುವ ಸಾಮರ್ಥ್ಯ ಮತ್ತು ಅದ್ಭುತಗಳ ಜ್ಞಾನದ ವರ - ಇವುಗಳನ್ನೊಳಗೊಂಡ ಪರಿಶುದ್ಧಾತ್ಮನ ಅಲೌಕಿಕ ವರಗಳು ದಾಟಿಹೋದವು. ಅವುಗಳು ಇನ್ನು ಮುಂದೆ ಅಗತ್ಯವಾಗಿರುವದಿಲ್ಲ. ಅವು ಅಪೊಸ್ತಲರಿಂದ ಮಾತಾಡಲ್ಪಟ್ಟ ವಾಕ್ಯವನ್ನು ದೃಢಪಡಿಸಲು ಕೊಡಲ್ಪಟ್ಟವು (ಮಾರ್ಕ 16:17-20; ಇಬ್ರಿಯ 2:2-4), ಆದರೆ ಈಗ ವಾಕ್ಯವು ದೃಢಪಡಿಲ್ಪಟ್ಟಿದೆ. ಅವು ಇನ್ನು ಪುರಾವೆಯಲ್ಲಿರುವದಿಲ್ಲ. ಹೊಸ ಒಡಂಬಡಿಕೆಯ ಸಮಯಗಳಲ್ಲಿಯಂತೆ ಜನರು ಇಂದು ಗುಣಪಡಿಸಲ್ಪಡುತ್ತಿರುವದಿಲ್ಲ (ನೋಡಿರಿ ಉದಾಹರಣೆಗಾಗಿ, ಅಪೊಸ್ತಲರ ಕೃತ್ಯಗಳು 3 ಮತ್ತು, ಇಂದು ಅದ್ಭುತಗಳು ಎಂದು ಕರೆಯುವಂಥವುಗಳೊಂದಿಗೆ ಇರುವ ವ್ಯತ್ಯಾಸವನ್ನು ನೋಡಿರಿ). ಸಭೆಯ ಪ್ರೌಢಾವಸ್ಥೆಯು, ದೇವರ ಪ್ರಕಟಣೆಯು ಪೂರ್ತಿಗೊಳಿಸುವಿಕೆಯನ್ನು ತಂದದ್ದೂ, ಅಲೌಕಿಕತೆಯು ಯುಗದ ಅಂತ್ಯವನ್ನು ಗುರುತಿಸಿತು. ಅಲೌಕಿಕವಾದ ವರಗಳು ದಾಟಿಹೋಗಿದ್ದರಿಂದ, ಪರಿಶುದ್ಧಾತ್ಮನಿಂದ ಅದ್ಭುತಕರವಾದ ಇಲ್ಲವೇ ಅಲೌಕಿಕವಾದ

ನಡಿಸುವಿಕೆಯನ್ನು ನಾವೆಂದೂ ನಿರೀಕ್ಷಿಸಲಾರೆವು.

ಇಂದು ಆತ್ಮನು ಜನರೊಂದಿಗೆ ನೇರವಾಗಿಯೂ ಅದ್ಭುತವಾಗಿಯೂ ಜನರೊಂದಿಗೆ ವರ್ತಿಸಿದರೂ, ಈ ಸಾಧನದಿಂದ ಆತನು ಅವರನ್ನು ರಕ್ಷಿಸುವನು ಎಂಬ ಸೂಚನೆ ಇರುವದಿಲ್ಲ. ಹೊಸ ಒಡಂಬಡಿಕೆಯಲ್ಲಿ ಪರಿಶುದ್ಧಾತ್ಮನ ಅದ್ಭುತಕರ ವಾದ ಮಾರ್ಗದರ್ಶನವು ಆಗಲೇ ಕ್ರಿಸ್ತನ ಶಿಷ್ಯರಾಗಿರುವವರಿಗೆ ಬಂದಿತು, ಆದರೆ ಕ್ರಿಸ್ತನ ಸಭೆಯ ಹೊರಗಿರುವವರಿಗೆ ಬರಲಿಲ್ಲ. ಉದಾಹರಣೆಯಾಗಿ - ಪ್ರೇರೇಪಿತರಾದ ಅಪೊಸ್ತಲರೂ ಸಹ - ಅಂಥ ಮಾರ್ಗದರ್ಶನವನ್ನು ಯಾವಾಗಲೂ ಹೊಂದಿ ಕೊಳ್ಳುವ ಅವಕಾಶವು ಳ್ಳವರಾಗಿರಲಿಲ್ಲ, ಎರಡನೆಯದು ಪ್ರಸಂಗ ಪ್ರಯಾಣದಲ್ಲಿ ಯೋಹಾನ ಮಾರ್ಕನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಬೇಕೋ? ಬೇಡವೋ ಎಂಬುದರ ಬಗ್ಗೆ ಪೌಲ ಮತ್ತು ಬಾರ್ನಬ ವಾದಮಾಡಿದರು. ಆ ಸಂದರ್ಭದಲ್ಲಿ ಯಾರು ಸರಿಯಾಗಿರುವರೆಂಬುದನ್ನು ಕರ್ತನು ಪ್ರಕಟನೆ ಮಾಡಲಿಲ್ಲ,

ಪ್ರತ್ಯೇಕವಾದ ವ್ಯಕ್ತಿಗೆ ಕರ್ತನು ಸುವಾರ್ತೆಯನ್ನು ಬೋಧಿಸಲು ಬಯಸುವಾಗ, ಆತನು ಯಾವಾಗಲೂ, ಅವನಿಗೆ ಸುವಾರ್ತಾ ಸಂದೇಶವನ್ನು ತರಲು ಯಾವುದೋ ಮಾನವ ವ್ಯಕ್ತಿಯನ್ನು ಒದಗಿಸಿದನೆಂದು ಹೊಸ ಒಡಂಡಿಕೆಯು ಸ್ಪಷ್ಟಪಡಿಸುತ್ತದೆ. ಐತಿಯೋಪ್ಯನ ಬಳಿಗೆ ಅವನು ಫಿಲಿಪ್ಪನನ್ನು ಕಳುಹಿಸಿದನು (ಅಪೊಸ್ತಲರ ಕೃತ್ಯಗಳು 8) ಮತ್ತು ಕೊರ್ನೇಲ್ಯನ ಬಳಿಗೆ ಪೇತ್ರನನ್ನು ಕಳುಹಿಸಿದನು (ಅಪೊಸ್ತಲರ ಕೃತ್ಯಗಳು 10). ಈ ಇಬ್ಬರು ಪುರುಷರಲ್ಲಿ ಯಾವ ಒಬ್ಬನನ್ನೂ ನೇರವಾದ ಮತ್ತು ಅದ್ಭುತಕರವಾದ ನಡಿಸುವಿಕೆಯಿಂದ ರಕ್ಷಿಸಲಿಲ್ಲ.

ಪರಿಶುದ್ಧಾತ್ಮನ ನಡಿಸುವಿಕೆಯಿಂದ ನೀನು ರಕ್ಷಿಸಲ್ಪಡಲು ಬಯಸಿದರೆ, ಆತ್ಮನಿಂದ ಅದ್ಭುತಕರವಾದ ಸಂದರ್ಶನವನ್ನು ನಿರೀಕ್ಷಿಸಬೇಕು. ಅದರ ಬದಲು, ಕೊರ್ನೇಲಿಯನು ಮಾಡಿದಂತೆ ಮಾಡು: ರಕ್ಷಿಸಲ್ಪಡುವುದು ಹೇಗೆ ಎಂಬುದನ್ನು ನಿನಗೆ ಹೇಳುವ ಸಂದೇಶವಾಹಕನಿಗಾಗಿ ಮುನ್ನೋಡು (ಅಪೊಸ್ತಲರ ಕೃತ್ಯಗಳು 11:14).

**ವಾಕ್ಯದ ವಿಶೇಷ ಪ್ರಕಾಶಗೊಳಿಸುವಿಕೆಯಿಂದ?**

ಎರಡನೆಯದಾಗಿ, *ಆತ್ಮನು ವಾಕ್ಯದ ವಿಶೇಷ ಪ್ರಕಾಶಗೊಳಿಸುವಿಕೆಯಿಂದ* ನಮ್ಮನ್ನು ನಡಿಸುವನೋ ಎಂದು ನಾವು ಕೇಳತಕ್ಕದ್ದೋ? ರಕ್ಷಿಸಲ್ಪಡಲು ಒಂದು ವಿಶೇಷ ಪ್ರಕಟಣೆಯು ನಿಮಗೆ ಅಗತ್ಯವಿಲ್ಲವೆಂದು ಕೆಲವರು ನಂಬಿದರೂ, ಬೈಬಲನ್ನು ಅರ್ಥಮಾಡಿಕೊಳ್ಳಲಿಕ್ಕೆ ನಿಮಗೆ ಆತನ ವಿಶೇಷ ಪ್ರಕಾಶಗೊಳಿಸುವಿಕೆಯು ಅಗತ್ಯವಿರುವುದು. ಇದು ನಿಜವಾಗಿರುವುದೋ?

ಒಬ್ಬ ವ್ಯಕ್ತಿಯ ತಿಳಿದುಕೊಳ್ಳುವದರಲ್ಲಿ ದೇವರ ಸಹಾಯವನ್ನು ಕೇಳಿಕೊಳ್ಳುತ್ತ, ಪ್ರಾರ್ಥನಾ ಪೂರ್ವಕವಾಗಿ ಬೈಬಲನ್ನು ಓದುತ್ತ, ಅಧ್ಯಯನ ಮಾಡತಕ್ಕದ್ದು (ನೋಡಿರಿ, ಉದಾಹರಣೆಗಾಗಿ, ಯಾಕೋಬ 1:5). ಆದರೆ ನಾವು ಮಾತಾಡುತ್ತಿರುವುದು ಅದಕ್ಕಿಂತ ಹೆಚ್ಚಾದದ್ದಾಗಿದೆ. ಅದು ಪರಿಶುದ್ಧಾತ್ಮನಿಂದ ಕೊಡಲ್ಪಟ್ಟ ನೇರವಾದ ಪ್ರಕಾಶಗೊಳಿಸುವಿಕೆಯಾಗಿದೆ, ಅದಿಲ್ಲದೇ ನಾವು ಬೈಬಲನ್ನು ಅರ್ಥಮಾಡಿಕೊ ಳ್ಳಲಾರೆವು, ಮತ್ತು ಅದು ಬರುವಾಗ, ಕುರುಡುತನವನ್ನು ತಕ್ಷಣವೇ ಎಲ್ಲವನ್ನೂ ಸ್ಪಷ್ಟಪಡಿಸುವುದು, ಅಂಥ ರೀತಿಯ ಪ್ರಕಾಶಗೊಳಿಸುವಿಕೆಯ ಅಗತ್ಯತೆಯಿರುವುದೋ?

ಇಲ್ಲ, ಪರಿಶುದ್ಧಾತ್ಮನು ಆಗಲೇ ನಾವು ಅರ್ಥಮಾಡಿಕೊಳ್ಳಬಲ್ಲ ಒಂದು ಪುಸ್ತಕವನ್ನು ನಮಗೆ ಕೊಟ್ಟದ್ದರಿಂದ ಅಲ್ಲ. ಬೈಬಲು ಅದನ್ನು ಓದಿ ಅರ್ಥ ಮಾಡಿಕೊಳ್ಳು ವದಕ್ಕಾಗಿಯೆ ಕೊಡಲ್ಪಟ್ಟಿವೆ ಎಂಬುದನ್ನು ಸೂಚಿಸುತ್ತದೆ. “ಬರೆದದ್ದನ್ನು ನೀವು ಓದಿ

ನೋಡಿದರೆ ಕ್ರಿಸ್ತನ ವಿಷಯವಾದ ಮರ್ಮವನ್ನು ಕುರಿತು ನನಗಿರುವ ಗ್ರಹಿಕೆಯನ್ನು ನೀವು ತಿಳಿದುಕೊಳ್ಳಬಹುದು" (ಎಫೆಸ 3:4) ಎಂದು ಪೌಲನು ಹೇಳಿದನು. ತಾನು ಏನು ಬರೆದಿದ್ದೇನೆ ಎಂಬುದನ್ನು ಎಫೆಸದವರು *ಅರ್ಥಮಾಡಿಕೊಳ್ಳಬೇಕೆಂಬುದನ್ನು* ಪೌಲನು ನಿರೀಕ್ಷಿಸಿದನು. ಅರ್ಥಮಾಡಿಕೊಳ್ಳಲಿಕ್ಕೆ ಅದ್ಭುತಕರವಾದ ಸಹಾಯ. ಇಲ್ಲವೇ ದೈವಿಕ ಪ್ರಕಾಶಗೊಳಿಸುವಿಕೆಯ ಅಗತ್ಯತೆ ಅವರಿಗಿತ್ತೆಂದು ನಿರೀಕ್ಷಿಸಲಿಲ್ಲ. ನಾವು ಬೈಬಲನ್ನು ಓದುವಾಗ, ಅರ್ಥಮಾಡಿಕೊಳ್ಳಲಿಕ್ಕೆ *ಕೆಲವು* ಸಂಗತಿಗಳು ಕಷ್ಟ ವಾಗಿ ಕಂಡರೂ (ಎಲ್ಲಾ ಸಂಗತಿಗಳಲ್ಲ ಇಲ್ಲವೇ ಹೆಚ್ಚಾದ ಸಂಗತಿಗಳಲ್ಲ, 2 ಪೇತ್ರ 3:15 ಇತ್ಯಾದಿ) ಬೈಬಲಿನ ಹೆಚ್ಚಾದ ಭಾಗವು ಅರ್ಥಮಾಡಿಕೊಳ್ಳಲಿಕ್ಕೆ ಸುಲಭವಾ ಗಿರುವುದನ್ನಾಗಿ ಕಂಡುಕೊಳ್ಳುತ್ತೇವೆ.

ಬೈಬಲನ್ನು ಅರ್ಥಮಾಡಿಕೊಳ್ಳಲಿಕ್ಕೆ ಪರಿಶುದ್ಧಾತ್ಮನಿಂದ ವಿಶೇಷ ಪ್ರಕಾಶ ಗೊಳಿಸುವಿಕೆಯು ಅಗತ್ಯವಾಗಿದೆಯೆಂದು ಕಲ್ಪಿಸಿಕೊಳ್ಳಿರಿ. ಮೊದಲ ಸ್ಥಳದಲ್ಲಿ, ಪರಿಶುದ್ಧಾತ್ಮನು ನಮಗೆ ಬೈಬಲನ್ನು ಕೊಟ್ಟದ್ದರಿಂದ, ತನ್ನ ಸ್ವಂತ ವಾಕ್ಯಗಳನ್ನು ನಮಗಾಗಿ ವ್ಯಾಖ್ಯಾನಿಸಲು ಪರಿಶುದ್ಧಾತ್ಮನು ನಮಗಿರತಕ್ಕದ್ದು (ನೋಡಿರಿ 2 ತಿಮೊಥೆ 3:16, 17; 2 ಪೇತ್ರ 1:20, 21). ರಕ್ಷಣೆಗಾಗಿ ನಮಗೆ ಅಗತ್ಯವಾಗಿರುವಂಥದ್ದು ಇಮ್ಮಡಿಯಾಗಿ ಪ್ರೇರೇಪಿಸಲ್ಪಟ್ಟ ಸಂದೇಶವು! ಮೊದಲಾಗಿ ಪರಿಶುದ್ಧಾತ್ಮನು ಬೈಬಲನ್ನು ಪ್ರೇರೇಪಿಸಿದ್ದರೆ, ಆತನು ಅದರ ವಾಚಕರನ್ನು ಅವರು ಅದನ್ನು ಅರ್ಥಮಾಡಿಕೊಳ್ಳುವ ಮೊದಲು ಅವರನ್ನು ಪ್ರೇರೇಪಿಸುವಂಥ ಸಾಧಾರಣ ಕೆಲಸ ಮಾಡಿದನೆಂದು ನಂಬುವುದು ಯೋಗ್ಯವಾಗಿದೆಯೋ?

ಮೊದಲನೆಯ ಶತಮಾನದಲ್ಲಿ ಅಪೊಸ್ತಲರ ಮಾತುಗಳನ್ನು ಅರ್ಥಮಾಡಿ ಕೊಳ್ಳಲಿಕ್ಕೆ ಯಾವುದೇ ವಿಶೇಷ ಪ್ರಕಾಶಗೊಳಿಸುವಿಕೆಯು, ಅಗತ್ಯವಾಗಿರಲಿಲ್ಲ. ಮಾನಸಾಂತರಪಟ್ಟು ಬಾಪ್ತಿಸ್ಮ ಹೊಂದಿರಿ ಎಂದು ಪಂಚಾಶತ್ತಮದ ದಿನದಂದು ಪೇತ್ರನು ಜನರಿಗೆ ಹೇಳಿದಾಗ, ಅವರು ಅವನನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಂಡರು (ಅಪೊಸ್ತಲರ ಕೃತ್ಯಗಳು 2:38 ಇತ್ಯಾದಿ). ಅದು ಅರ್ಥಮಾಡಿಕೊಳ್ಳುವ ಇಲ್ಲವೇ ಅರ್ಥಮಾಡಿಕೊಳ್ಳದೇ ಇರುವ ವಿಷಯವಾಗಿರಲಿಲ್ಲ; ಅದು ಸಂದೇಶವನ್ನು ಸ್ವೀಕರಿಸುವ ಇಲ್ಲವೇ ತಿರಸ್ಕರಿಸುವ ವಿಷಯವಾಗಿತ್ತು. ಅದು ಇಂದಿನ ಸಮಸ್ಯೆಯೂ ಆಗಿದೆ: ಸಂದೇಶವು ಅರ್ಥಮಾಡಿಕೊಳ್ಳುವಂಥದ್ದಾಗಿದೆ, ಅದರೆ ಕೆಲವು ಜನರು ಅದನ್ನು ತಿರಸ್ಕರಿಸುವದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ಆತ್ಮನ ಬೆಳಗಿಸುವಿಕೆಯನ್ನು ಹುಡುಕುತ್ತಿರುವೆವು ಎಂದು ಜನರು ಹೇಳುವಾಗ, ಅವರು ಬೈಬಲನ್ನು ಅರ್ಥಮಾಡಿಕೊಳ್ಳಲು ನಿಜವಾಗಿಯೂ ಆಸಕ್ತಿ *ಹೊಂದಿದವರಾಗಿರುವದಿಲ್ಲ*, ಅವರು ಆಗಲೇ ನಂಬಿದ್ದಕ್ಕಾಗಿ ನ್ಯಾಯ ಒದಗಿಸುವ ಯಾವುದನ್ನಾದರೂ ಕಂಡು ಕೊಳ್ಳ ಬಹುದೆಂದು ನಿರೀಕ್ಷಿಸುತ್ತಾರೆ. "ನಾನು ಆಗಲೇ ನಂಬಿರುವಂತೆ ಅದನ್ನು ಅರ್ಥಮಾಡಿ ಕೊಳ್ಳಲಿಕ್ಕೆ ನನಗೆ ಸಹಾಯ ಮಾಡು, ಕರ್ತನೇ" ಎಂದು ಅವರು ಪ್ರಾರ್ಥಿಸುತ್ತಾರೆ.

ಆದುದರಿಂದ, ನಿಮ್ಮ ಅಗತ್ಯತೆಯು ಪರಿಶುದ್ಧಾತ್ಮನಿಂದ ಕೆಲವೊಂದು ಪ್ರಕಾಶ ಗೊಳಿಸುವಿಕೆಯಾಗಿರುವದಿಲ್ಲ: ಅದರ ಬದಲು ನಿಮಗೆ ಅಗತ್ಯವಾಗಿರುವುದು, ಪರಿಶುದ್ಧ ಬರಹಗಳ ಸರಳ ಹೇಳಿಕೆಗಳನ್ನು ಸ್ವೀಕರಿಸಲು, ನಂಬಲು ಮತ್ತು ವಿಧೇಯರಾಗಲು ಮನಸುಳ್ಳವರಾಗಿರುವುದು.

**ದೇವರ ವಾಕ್ಯದಿಂದ**

ಅದ್ಭುತಕರವಾಗಿ ಇಲ್ಲವೇ ವಾಕ್ಯದ ವಿಶೇಷ ಪ್ರಕಾಶಗೊಳಿಸುವಿಕೆಯಿಂದ

ನಡಿಸದೇ, ಪರಿಶುದ್ಧಾತ್ಮನು *ದೇವರ ವಾಕ್ಯವಾದ ಬೈಬಲಿನ ಮುಖಾಂತರ* ರಕ್ಷಣೆಗೆ ನಮ್ಮನ್ನು ನಡಿಸುತ್ತಾನೆ.

ಅಪೊಸ್ತಲರಿಗೆ ಮಾಡಿದ ವಾಗ್ದಾನವನ್ನು ಗಮನಿಸಿರಿ: "ಆತನು [ಪರಿಶುದ್ಧಾತ್ಮನು] ಬಂದು ಪಾಪ, ನೀತಿ, ನ್ಯಾಯತೀರ್ವಿಕೆ ವಿಷಯಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು. ಅವರು ನನ್ನನ್ನು ನಂಬದೇ ಇರುವದರಿಂದ ಪಾಪದ ವಿಷಯದಲ್ಲಿಯೂ ಅರುಹನ್ನು ಹುಟ್ಟಿಸುವನು" (ಯೋಹಾನ 16:8, 9). ರಕ್ಷಿಸಲ್ಪಡಬೇಕಾದರೆ, ನಾವು ಪಾಪ, ನೀತಿಯ ಮತ್ತು ನ್ಯಾಯತೀರ್ವಿಕೆಯ ವಿಷಯದಲ್ಲಿ ಅರುಹು ಹೊಂದಿದವರಾಗಿರಬೇಕು. ಹೊಸ ಒಡಂಬಡಿಕೆಯ ಸಮಯಗಳಲ್ಲಿ ಪರಿಶುದ್ಧಾತ್ಮನು ಜನರಿಗೆ ಪಾಪದ ಅರುಹನ್ನು ಹೇಗೆ ಉಂಟು ಮಾಡಿದನು? ಅಪೊಸ್ತಲರ ಕೃತ್ಯಗಳು 2ರಲ್ಲಿ ಯೇಸುವು ಕರ್ತನೂ ಕ್ರಿಸ್ತನೂ ಆಗಿದ್ದಾನೆಂದು ಪೇತ್ರನು *ಪ್ರಸಂಗಿಸಿದನು*. ಅದರ ಪರಿಣಾಮವೇನು? ಪಾಪದ ಅರುಹು ಹುಟ್ಟಿಸಲ್ಪಟ್ಟಿತು: "ಇದನ್ನು ಅವರು ಕೇಳಿ ಹೃದಯದಲ್ಲಿ ಅಲುಗುನೆಟ್ಟಂತಾಗಿ ಪೇತ್ರನನ್ನೂ ಉಳಿದ ಅಪೊಸ್ತಲರನ್ನೂ ಸಹೋದರರೇ, ನಾವೇನು ಮಾಡಬೇಕೆಂದು ಕೇಳಿದರು" (ಅಪೊಸ್ತಲರ ಕೃತ್ಯಗಳು 2:37). ಅಪರಾಧದ ಮನವರಿಕೆಯು ಪರಿಶುದ್ಧಾತ್ಮನಿಂದ ಪ್ರೇರಿತವಾದ ವಾಕ್ಯದ ಪ್ರಸಂಗದ ಮೂಲಕವಾಗಿ ಬಂದಿತು! "ಆತ್ಮನ ಖಡ್ಗವು, ... ದೇವರ ವಾಕ್ಯವಾಗಿದೆ" ಎಂದು ಪೌಲನು ಹೇಳಿದ್ದರಲ್ಲಿ ಆಶ್ಚರ್ಯವಿಲ್ಲ (ಎಫೆಸ 6:17). ಆತ್ಮನು ಆತನ ಖಡ್ಗವನ್ನು, ದೇವರ ವಾಕ್ಯವನ್ನು ಕೊಯ್ಯಲು, ದಂಡಿಸಲು ಮತ್ತು ಮನದಟ್ಟು ಮಾಡಿಕೊಡಲು, ರಕ್ಷಣೆಗೆ ಜನರನ್ನು ಆತನು ನಡಿಸುವಂತೆ ಉಪಯೋಗಿಸುತ್ತಾನೆ.

ರಕ್ಷಿಸಲ್ಪಡುವದಕ್ಕಾಗಿ ನಾವು ನೀರಿನಿಂದಲೂ ಅತ್ಮನಿಂದಲೂ ಹುಟ್ಟತಕ್ಕದ್ದೆಂದು ಬೈಬಲ್ ಹೇಳುತ್ತದೆ. ಆದುದರಿಂದ *ನಾವು ಆತ್ಮನಿಂದ ಹುಟ್ಟಿದವರಾಗಿರುತ್ತೇವೆ*(ಯೋಹಾನ 3:5, 9). *ವಾಕ್ಯದ ಮುಖಾಂತರ* ನಾವು ಪುನಃ ಹುಟ್ಟಿದ್ದೇವೆಂದು ಸಹ ಬೈಬಲ್ ಹೇಳುತ್ತದೆ: "ನೀವು ಪುನರ್ಜನ್ಮ ಹೊಂದಿದವರಾಗಿದ್ದೀರಲ್ಲಾ; ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ, ನಾಶವಾಗದ ಬೀಜದಿಂದಲೇ ಉಂಟಾದದ್ದು. ಅದು ದೇವರ ಸದಾ ಜೀವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು" (1 ಪೇತ್ರ 1:23).

ಇದಲ್ಲದೇ, *ನಾವು ಆತ್ಮನಲ್ಲಿ ಪ್ರತಿಷ್ಠಿಸಲ್ಪಟ್ಟಿದ್ದೇವೆಂದು* ಬೈಬಲ್ ಹೇಳುತ್ತದೆ: "ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ ನಮ್ಮ ದೇವರ ಆತ್ಮದಲ್ಲಿಯೂ ತೊಳೆದುಕೊಂಡಿರಿ, ಪರಿಶುದ್ಧರಾದಿರಿ, ನೀತಿವಂತರೆಂಬ ನಿರ್ಣಯವನ್ನು ಹೊಂದಿದಿರಿ" (1 ಕೊರಿಂಥ 6:11). ಇದು, ನಾವು ವಾಕ್ಯದ ಮುಖಾಂತರ ಪ್ರತಿಷ್ಠಿಸಲ್ಪಟ್ಟಿದ್ದೇವೆಂದು ಬೋಧಿಸುತ್ತದೆ. "ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು; ನಿನ್ನ ವಾಕ್ಯವೇ ಸತ್ಯವು" (ಯೋಹಾನ 17:17) ಎಂದು ಯೇಸು ಹೇಳಿದರು.

ನಾವು *ಆತ್ಮನಿಂದ ರಕ್ಷಿಸಲ್ಪಟ್ಟಿದ್ದೇವೆ* ಎಂದು ಬೈಬಲ್ ಬೋಧಿಸುತ್ತದೆ: "ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪರಿಶುದ್ಧಾತ್ಮನು ನಮ್ಮಲ್ಲಿ ನೂತನ ಸ್ವಾಭಾವವನ್ನು ಉಂಟುಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು" (ತೀತ 3:5). *ವಾಕ್ಯದ ಮುಖಾಂತರವಾಗಿಯೂ* ನಾವು ರಕ್ಷಿಸಲ್ಪಟ್ಟಿದ್ದೇವೆಂದು ಬೈಬಲ್ ಹೇಳುತ್ತದೆ: "... ಮನಸ್ಸಿನೊಳಗೆ ಬೇರೂರಿರುವ ವಾಕ್ಯಕ್ಕೆ ನಮ್ರತೆಯಿಂದ ಎಡೆಗೊಡಿರಿ; ಅದು ನಿಮ್ಮ ಆತ್ಮಗಳನ್ನು ರಕ್ಷಿಸುವದಕ್ಕೆ ಸಾಮರ್ಥ್ಯವುಳ್ಳದ್ದಾಗಿದೆ" (ಯಾಕೋಬ 1:21).

ಆದುದರಿಂದ, *ನಮ್ಮನ್ನು ರಕ್ಷಣೆಗೆ ನಡಿಸುವದಕ್ಕೆ ಪರಿಶುದ್ಧಾತ್ಮನು ಮಾಡುವದನ್ನು,*

*ಆತನು ವಾಕ್ಯದ ಮುಖಾಂತರ ಮಾಡುವನು* ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ! ಪರಿಶುದ್ಧಾತ್ಮನಿಂದ ರಕ್ಷಿಸಲ್ಪಡಲು ನೀವು ಬಯಸುತ್ತೀರೋ? ಹಾಗಾದರೆ ಆತ್ಮನಿಂದ ನಡಿಸಿಕೊಳ್ಳಲ್ಪಡಿರಿ. ಆತ್ಮನಿಂದ ನೀವು ನಡಿಲ್ಪಡಲು ಬಯಸುತ್ತೀರೋ, ಆಗ ಪರಿಶುದ್ಧಾತ್ಮನು ಪ್ರೇರೇಪಿಸಿದ ವಾಕ್ಯದಿಂದ ನೀವು ನಡಿಸಲ್ಪಡತಕ್ಕದ್ದು.

## ಪರಿಶುದ್ಧಾತ್ಮನು ನಮ್ಮನ್ನು ಎಲ್ಲಿಗೆ ನಡಿಸುವನು?

ಪರಿಶುದ್ಧಾತ್ಮನು ನಮ್ಮನ್ನು ಎಲ್ಲಿಗೆ ನಡಿಸುವನು? ಆತನು ದೇವರ ವಾಕ್ಯವನ್ನು ಪ್ರೇರೇಪಿಸಿರುವನು. ಆ ವಾಕ್ಯದ ಮುಖಾಂತರ ನಮ್ಮನ್ನು ನಡಿಸುವನು. ಆದರೆ ಪರಿಶುದ್ಧಾತ್ಮನು ಏನು ಮಾಡಬೇಕೆಂದು ನಮಗೆ ಹೇಳುತ್ತಿರುವನು? ಉತ್ತರಕ್ಕಾಗಿ, ನಿಮ್ಮ ಹೊಸ ಒಡಂಬಡಿಕೆಯನ್ನು ತೆಗೆದುಕೊಂಡು ಓದಿರಿ.

### ಕ್ರಿಸ್ತನಲ್ಲಿ ಒಂದು ನಂಬಿಕೆ

ಮೊದಲನೆಯದು, ಆತನು ನಮ್ಮನ್ನು ಕ್ರಿಸ್ತನಲ್ಲಿ ಒಂದು ನಂಬಿಕೆಯಲ್ಲಿ ನಡಿಸುವನು. ಆದರಿಕನು, ಪರಿಶುದ್ಧಾತ್ಮನು, ಆತನ ಬಗ್ಗೆ ಸಾಕ್ಷಿಕೊಡುವನೆಂದು ಯೇಸು ಹೇಳಿದನು (ಯೋಹಾನ 15:26), ಮತ್ತು ಆತನು ಯೇಸುವನ್ನು ಮಹಿಮೆಪಡಿಸುವನು (ಯೋಹಾನ 16:14). ಪರಿಶುದ್ಧಾತ್ಮನು ಪ್ರೇರೇಪಿಸಿದ ವಾಕ್ಯವು (2 ತಿಮೊಥೆ 3:16, 17) ವಿಶ್ವಾಸವನ್ನು ಹುಟ್ಟಿಸುತ್ತದೆ: "ಆದ ಕಾರಣ ಕೇಳುವದರಿಂದ ನಂಬಿಕೆಯು ಬರುತ್ತದೆ, ಮತ್ತು ಕೇಳುವಿಕೆಯು ಕ್ರಿಸ್ತನ ವಾಕ್ಯದಿಂದ ಬರುತ್ತದೆ" (ರೋಮಾಪುರ 10:17). ಅಪೊಸ್ತಲರ ಕೃತ್ಯಗಳು 2ರಲ್ಲಿ ಪಂಚಾಶತ್ತಮ ದಿನದ ಪೇತ್ರನ ಪ್ರಸಂಗದ ಮೊದಲನೆಯ ಪರಿಣಾಮವು ನಂಬಿಕೆ. ಯೇಸುವು ನಿಜವಾಗಿಯೂ ಕ್ರಿಸ್ತನಾಗಿದ್ದಾನೆಂದು ಕೇಳಿದವರಿಗೆ ಅವನು ದೃಢಪಡಿಸಿದನು. ಆಗ ಈ ವಿಶ್ವಾಸಿಗಳು "ನಾವು ಏನು ಮಾಡಬೇಕು?" ಎಂದು ಕೂಗಿದರು (ಅಪೊಸ್ತಲರ ಕೃತ್ಯಗಳು 2:36, 37).

### ಪಾಪದ ಒಂದು ಮನವರಿಕೆ

ಎರಡನೆಯದಾಗಿ, ಪರಿಶುದ್ಧಾತ್ಮನು ಪಾಪದ ಮನವರಿಕೆಗೆ ನಿಮ್ಮನ್ನು ನಡಿಸುವನು. ಅದು ಪಂಚಾಶತ್ತಮ ದಿನದಂದು ಹಾಗೆ ಸಂಭವಿಸಿತು (ಅಪೊಸ್ತಲರ ಕೃತ್ಯಗಳು 2). ಯೇಸುವಿನಲ್ಲಿ ನಂಬಿಕೆಯಿಟ್ಟಾಗ. ಜನರು "ಹೃದಯದಲ್ಲಿ ಅಲಗುನೆಟ್ಟಂತವರಾದರು." ಅವರು ಪಾಪದ ಅರುಹನ್ನು ಹೊಂದಿಕೊಂಡರು. ಅವರು ಯಾವುದೋ ಪಾಪಭರಿತ ದೇವದೂಷಕನನ್ನಲ್ಲ ಆದರೆ ದೇವರ ಕುಮಾರನನ್ನು, ಮೆಸ್ಸೀಯನನ್ನು ಶಿಲುಬೆಗೆ ಹಾಕಿದ ಅಪರಾಧಿಗಳಾಗಿದ್ದೇವೆಂದು ಅರ್ಥ ಮಾಡಿಕೊಂಡರು. ಅವರು ಅಪರಾಧಿಗಳೆಂದು ಭಾವಿಸಿದರು. ಆದರೆ, ಅವರಷ್ಟೇ ಅಲ್ಲ, ನಾವೂ ಸಹ, ಕ್ರಿಸ್ತನು ಶಿಲುಬೆಗೆ ಹಾಕಲ್ಪಡುವದಕ್ಕೆ ಅಪರಾಧಿಗಳಾಗಿದ್ದೇವೆಂಬುದನ್ನು ಅರ್ಥಮಾಡಿಕೊಳ್ಳುವ ಅಗತ್ಯತೆಯಿದೆ. ಪಾಪದ ದಂಡನೆಯನ್ನು ನಾವು ಹೊಂದುವ ಅಗತ್ಯತೆಯಿದೆ. ನಾವು ಪಾಪದ ಅರುಹನ್ನು ಹೊಂದದಿದ್ದರೆ, ನಾವು ವಾಕ್ಯವನ್ನು ಕೇಳಲು ನಿರಾಕರಿಸುತ್ತಿದ್ದೇವೆ!

### ಮಾನಸಾಂತರ

ನೀವು ಹೊಸ ಒಡಂಬಡಿಕೆಯನ್ನು ಓದುವಾಗ, ಮೂರನೆಯದಾಗಿ, ಪರಿಶುದ್ಧಾತ್ಮನು ನಿಮ್ಮನ್ನು ಮಾನಸಾಂತರದಲ್ಲಿ ನಡಿಸುತ್ತಾನೆಂದು ಕಂಡುಕೊಳ್ಳುತ್ತೇವೆ. ಜನರು

ನಂಬಿದಾಗ ಮತ್ತು ಪಾಪಗಳ ಅರುಹನ್ನು ಹೊಂದಿದಾಗ ಅವರು ಮಾನಸಾಂತರ ಪಡಬೇಕೆಂದು ಪೇತ್ರನು ಅವರಿಗೆ ಹೇಳಿದನು (ಅಪೊಸ್ತಲರ ಕೃತ್ಯಗಳು 2:38). ಮಾನಸಾಂತರವು ಪಾಪದ ಅಪರಾಧ ನಿರ್ಣಯವಾಗಿರುವದಿಲ್ಲ; ಅದು ಅಂಥ ಅರುಹಿನಿಂದ ಪರಿಣಾಮಗೊಳ್ಳುತ್ತದೆ. ಅದು ಇನ್ನು ಮುಂದೆ ಪಾಪಮಾಡದಿರುವದನ್ನು ತೀರ್ಮಾನಿಸಿಕೊಳ್ಳುವುದಾಗಿದೆ ಇಂದು ಇದು ಎಲ್ಲಾ ಜನರಿಗಾಗಿ ದೇವರ ಸಂದೇಶ ವಾಗಿದೆ: "ಆ ಅಜ್ಞಾನ ಕಾಲಗಳನ್ನು ದೇವರು ಲಕ್ಷ್ಯಕ್ಕೆ ತರಲಿಲ್ಲ: ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆ ಕೊಡುತ್ತಾನೆ" (ಅಪೊಸ್ತಲರ ಕೃತ್ಯಗಳು 17:30). ಎಲ್ಲರೂ ಮಾನಸಾಂತರ ಪಡಬೇಕಾಗಿದ್ದದರಿಂದ, ಇದು ನೇರವಾಗಿ ಪರಿಶುದ್ಧಾತ್ಮನಿಂದ ಬಂದ ಸಂದೇಶವೆಂದು ಯೋಚಿಸಿರಿ: ನೀವು ಮಾನಸಾಂತರ ಪಡತಕ್ಕದ್ದು!

**ಕ್ಷಮಾಪಣೆಗಾಗಿ ಬಾಪ್ತಿಸ್ಮ**

ಅನಂತರ, ನೀವು ಹೊಸ ಒಡಂಬಡಿಕೆಯನ್ನು ಓದುವಾಗ, ಪರಿಶುದ್ಧಾತ್ಮನು ನಿಮ್ಮನ್ನು ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮಕ್ಕೆ - ಪಾಪಗಳ ನಿವಾರಣೆಗಾಗಿ ನೀರಿ ನಲ್ಲಿ ಬಾಪ್ತಿಸ್ಮಕ್ಕೆ ನಡಿಸುತ್ತಾನೆ ಎಂಬುದನ್ನು ಕಂಡುಕೊಳ್ಳುವಿರಿ. ಈ ಬಾಪ್ತಿಸ್ಮವು ಯಾವಾಗಲೂ ಪರಿಶುದ್ಧಾತ್ಮನೊಂದಿಗೆ ಸಂಬಂಧಿಸಿರುತ್ತದೆ. ಯೋಹಾನ 3:5ನ್ನು ಜ್ಞಾಪಿಸಿಕೊಳ್ಳಿರಿ: ನಾವು *ನೀರಿನಿಂದಲೂ ಆತ್ಮನಿಂತಲೂ* ಹುಟ್ಟತಕ್ಕದ್ದೆಂದು ಯೇಸು ಹೇಳಿದನು. "ಆತ್ಮನು" ನಿಶ್ಚಯವಾಗಿಯೂ ಪರಿಶುದ್ಧಾತ್ಮನಾಗಿದ್ದಾನೆ; "ನೀರು" ಬಾಪ್ತಿಸ್ಮದ ನೀರು ಆಗಿರುತ್ತದೆ. ಹೀಗೆ ಆತ್ಮನಿಂದ ಪುನಃ ಹುಟ್ಟುವುದಕ್ಕಾಗಿ, ಒಬ್ಬನು ನೀರಿನಲ್ಲಿ ಬಾಪ್ತಿಸ್ಮ ಹೊಂದಬೇಕು. ಪಂಚಾಶತ್ತಮದ ದಿನದಂದು, ಹೇಳುವದಕ್ಕೆ ಪರಿಶುದ್ಧಾತ್ಮನು ಕೊಟ್ಟ ಮಾತುಗಳನ್ನು ಪೇತ್ರನು ಪ್ರಸಂಗಿಸಿದನು. ಪರಿಶುದ್ಧಾತ್ಮನ ಬಲದಿಂದ, ಇತರರು ರಕ್ಷಿಸಲ್ಪಡಬೇಕಾದರೆ ಏನು ಮಾಡಬೇಕೆಂದು ಅವನು ಹೇಳಿದನು? "ಮಾನಸಾಂತರ ಪಡಿರಿ ... ನಿಮ್ಮ ಪಾಪಗಳ ಕ್ಷಮಾಪಣೆಗಾಗಿ ... ಬಾಪ್ತಿಸ್ಮ ಮಾಡಿಸಿಕೊಳ್ಳಿರಿ" (ಅಪೊಸ್ತಲರ ಕೃತ್ಯಗಳು 2:38). ಬಾಪ್ತಿಸ್ಮ ಹೊಂದಲಿಕ್ಕೆ ಆತ್ಮನು ಪಂಚಾಶತ್ತಮ ದಿನದಂದು ಜನರನ್ನು ನಡಿಸಿದನು. ಹಾಗೆಯೇ, ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಕ್ರೈಸ್ತರಾದ ಇತರರನ್ನು ಬಾಪ್ತಿಸ್ಮ ಹೊಂದಿಕೊಳ್ಳಲಿಕ್ಕೆ ನಡಿಸಿದನು; ನಮಗೆ ವಿವರಣೆಯಿರುವ ಪ್ರತಿಯೊಂದು ಮಾರ್ಪಡುವಿಕೆಯಲ್ಲಿ, ಜನರು ಬಾಪ್ತಿಸ್ಮ ಹೊಂದಿದರೆಂದು ಅಪೊಸ್ತಲರ ಕೃತ್ಯವು ವಿವರಿಸುತ್ತದೆ. ಆಗ ಪರಿಶುದ್ಧತ್ಮನು ರಕ್ಷಿಸಲ್ಪಡಲು ಜನರನ್ನು ಬಾಪ್ತಿಸ್ಮಕ್ಕೆ ನಡಿಸಿದ್ದರೆ, ಅದೇ ಸಂಗತಿಯನ್ನು ಮಾಡ ಬೇಕೆಂದು ಆತ್ಮನು ನಿನ್ನನ್ನು ಒತ್ತಾಯಿಸುತ್ತಾನೆ: ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಿರಿ!

**ಕ್ರಿಸ್ತನ ಸಭೆ**

ಐದನೆಯದಾಗಿ, ನೀವು ಹೊಸ ಒಡಂಬಡಿಕೆಯನ್ನು ಓದುವಾಗ, ಪರಿಶುದ್ಧಾ ತ್ಮನು ನಿಮ್ಮನ್ನು ಕ್ರಿಸ್ತನ ಸಭೆಯಲ್ಲಿ ನಡಿಸುವನೆಂದು ನೀವು ಕಲಿತುಕೊಳ್ಳುವಿರಿ. ಇದು ಪಂಚಾಶತ್ತಮ ದಿನದ ಘಟನೆಗಳ ಪರಿಣಾಮವಾಗಿರುತ್ತದೆ. ಪರಿಶುದ್ಧಾ ತ್ಮನ ಸಂದೇಶವನ್ನು ಸ್ವೀಕರಿಸಿದವರು ಬಾಪ್ತಿಸ್ಮ ಹೊಂದಿದವರು ಮತ್ತು ಅದನ್ನು ಪ್ರಸಂಗಿಸಿದವರೊಂದಿಗೆ "ಕೂಡಿಸಲ್ಪಟ್ಟರು" (ಅಪೊಸ್ತಲರ ಕೃತ್ಯಗಳು 2:41).

ಅಪೊಸ್ತಲರ ಕೃತ್ಯಗಳು 2:47ರಲ್ಲಿ ರಕ್ಷಿಸಲ್ಪಟ್ಟವರನ್ನು ಪ್ರತಿದಿನವೂ ಕರ್ತನು ಸಭೆಗೆ ಸೇರಿಸುತ್ತಿದ್ದಾನೆಂದು ನಾವು ಓದುತ್ತೇವೆ (KJV). "ಸಭೆ" ಎಂಬುದಕ್ಕೆ ಪದವು ಮೂಲದಲ್ಲಿ ಇರುವದಿಲ್ಲ, ಆದರೆ ಭಾವನೆಯು ಇರುತ್ತದೆ. ಈ ಹಂತದಿಂದ ಮುಂದೆ ಸಭೆಯು ಅಸ್ತಿತ್ವದಲ್ಲಿದೆ, ಮತ್ತು ಬಾಪ್ತಿಸ್ಮ ಹೊಂದಿದವರು ಅದಕ್ಕೆ ಕೂಡಿಸಲ್ಪಟ್ಟರು. 1 ಕೊರಿಂಥ 12:13ರಲ್ಲಿ ಪೌಲನು ಇದನ್ನು ಉಲ್ಲೇಖಿಸುತ್ತಾನೆ: "ನಾವೆಲ್ಲರು ಒಂದೇ ದೇಹವಾಗುವದಕ್ಕಾಗಿ ಒಂದೇ ಆತ್ಮನಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡೆವು ...." ದೇಹವು ಸಭೆಯಾಗಿದೆ (ಎಫೆಸ 1:22, 23). ಅದು ಯಾವ ದೇಹ ಅಥವಾ ಸಭೆ ಆಗಿದೆ? ಅದು ಒಂದೇ ಸಭೆಯಾಗಿದೆ (ಎಫೆಸ 4:5). ಅದು ಯಾವುದೇ ಮನುಷ್ಯ ನಿರ್ಮಿತ ಸಭೆಯಾಗಿರುವದಿಲ್ಲ; ಅದು ಕ್ರಿಸ್ತನ ಸಭೆ! (ಮತ್ತಾಯ 16:18). ಪಾಪಗಳ ಪರಿಹಾರಕ್ಕಾಗಿ ಬಾಪ್ತಿಸ್ಮ ಹೊಂದಲು ನೀವು ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟಾಗ ನೀವು ಕರ್ತನ ಸಭೆಯೊಳಗೆ ಆತ್ಮನಿಂದ ನಡಿಸಲ್ಪಟ್ಟಿರುವಿರಿ. ಆ ಸಭೆಯಲ್ಲಿ, ಪರಿಶುದ್ಧಾತ್ಮನಿಂದ ಹೆಚ್ಚಿನ ಆಶೀರ್ವಾದಗಳೂ, ಹೆಚ್ಚಿನ ಜವಾಬ್ದಾರಿಕೆಗಳೂ ಒದಗಿಸಲ್ಪಟ್ಟಿವೆ. ನಿಮ್ಮ ಜೀವಮಾನವೆಲ್ಲಾ ನಂಬಿಗಸ್ತಿಕೆಯಿಂದ ಆರಾಧಿಸುವ ಮತ್ತು ಕಾರ್ಯಮಾಡುವ ಜವಾಬ್ದಾರಿಕೆ ಇರುವುದು. ಆದರೆ ನೀವು ಇಲ್ಲಿ ರಕ್ಷಿಸಲ್ಪಟ್ಟವರ ಮಧ್ಯದಲ್ಲಿರುವಿರಿ ಹಾಗೂ ದೇವರ ಕೃಪೆಯಿಂದ, ಆತನ ವಾಕ್ಯದಿಂದ ನೀವು ನಡಿಸಲ್ಪಟ್ಟರೆ, ನಿಮಗೆ ಪರಲೋಕದಲ್ಲಿ ಮನೆಯಿರುವುದು ಎಂಬುದರ ಭರವಸೆಯುಳ್ಳವರಾಗಿರ್ರಿ.

ಈ ಹಂತದಲ್ಲಿ ಕೆಲವರು ಆಕ್ಷೇಪಿಸಬಹುದು: "ಆತ್ಮನು ಅದರಿಂದ ಭಿನ್ನವಾದದ್ದರ ಕಡೆಗೆ ನಡಿಸಿದನು" ಎನ್ನಬಹುದು. ರಕ್ಷಿಸಲ್ಪಡಲು ನಿಮ್ಮನ್ನು ಆತನು ಯಾವುದೋ ಭಿನ್ನವಾದದ್ದನ್ನು ಮಾಡಲು ನಡಿಸಿರಬಹುದು, ಇಲ್ಲವೇ ಆತನು ನಿಮ್ಮನ್ನು ಭಿನ್ನವಾದ ಗುಂಪಿನೊಳಗೆ ಇಲ್ಲವೇ ಸಭೆಯೊಳಗೆ ಇಲ್ಲವೇ ಸಭಾಪಂಗಡದೊಳಗೆ ನಡಿಸಿರಬಹುದು.

ಇನ್ನೊಂದು ದಿಕ್ಕಿನ ಕಡೆಗೆ ಆತ್ಮನು ನಿಮ್ಮನ್ನು ನಡಿಸಿದನೆಂದು ಹೇಳುವಲ್ಲಿ ನೀವು ಸರಿಯಾಗಿರಬಹುದು: ಆದರೆ "ಅದು ದೇವರ ಆತ್ಮವಾಗಿರುವುದೋ?" ಎಂಬ ಪ್ರಶ್ನೆ ಬರುತ್ತದೆ. "ಪ್ರಿಯರೇ, ಅನೇಕಮಂದಿ ಸುಳ್ಳು ಪ್ರವಾದಿಗಳು ಲೋಕದೊಳಗೆ ಬಂದಿರುವದರಿಂದ ನೀವು ಆತ್ಮದ ಎಲ್ಲಾ ನುಡಿಗಳನ್ನು ನಂಬದೇ ಆಯಾ ನುಡಿಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು" (1 ಯೋಹಾನ 4:1) ಎಂದು ಬೈಬಲ್ ಹೇಳುವದನ್ನು ಜ್ಞಾಪಿಸಿಕೊಳ್ಳಿರಿ: ಜಗತ್ತಿನಲ್ಲಿ ಸುಳ್ಳು ಹೇಳುವ ಆತ್ಮಗಳು, ಸುಳ್ಳು ಪ್ರವಾದಿಗಳು ಇರುವರು.

ಒಬ್ಬ ಸುಳ್ಳು ಪ್ರವಾದಿಯಿಂದ ಇಲ್ಲವೇ ಪರಿಶುದ್ಧಾತ್ಮನಿಂದ ನೀವು ನಡಿಸಲ್ಪಟ್ಟಿರುವಿರೋ ಇಲ್ಲವೋ ಎಂಬುದನ್ನು ನೀವು ಹೇಗೆ ತಿಳಿಯಬಹುದು? ನಿಮ್ಮನ್ನು ನಡಿಸಿದವರು ಹೊಸ ಒಡಂಬಡಿಕೆಯ ಸಮಯಗಳಲ್ಲಿ ಮಾಡಲಿಕ್ಕೆ ಜನರನ್ನು ಪರಿಶುದ್ಧಾತ್ಮನು ನಡಿಸಿದ್ದರಲ್ಲಿ ಅದೇ ಸಂಗತಿಗಳನ್ನು ಮಾಡಲು ಬೋಧಿಸಿರುವರೋ ಎಂದು ಪ್ರಶ್ನೆ ಮಾಡುವದರಿಂದ ತಿಳಿಯಬಹುದು. ಇತರ ಬೇರೆ ಯಾವುದೇ ವಾದವನ್ನು ನೀವು ಸ್ವೀಕರಿಸಿರಿ ಇಲ್ಲವೇ ಬಿಡಿರಿ, ಈ ಸಂಗತಿಗಳನ್ನು ನೀವು ಸ್ವೀಕರಿಸತಕ್ಕದ್ದು: ಇಲ್ಲಿ ಹೇಳಿದ ಐದು ಸಂಗತಿಗಳಿಗಿಂತ ಭಿನ್ನವಾದ ಇಲ್ಲವೇ ಕಡಿಮೆಯಾದದ್ದನ್ನು ಮಾಡಲು ನೀವು ನಡಿಸಲ್ಪಟ್ಟರೆ, ನೀವು ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟವರಾಗಿರುವದಿಲ್ಲ!

## ಮುಕ್ತಾಯ

ಆತ್ಮನಿಂದ ನೀವು ನಡಿಸಲ್ಪಡುವಿರೋ? ಆತನು ಮಾನವ ರೂಪದಲ್ಲಿ ಇಲ್ಲಿ

ಇದ್ದಿದ್ದರೆ, ಈ ಮಹತ್ವದ ವಿಷಯಗಳ ಮೇಲೆ ಬೈಬಲ್ ಬೋಧಿಸುವದಕ್ಕಿಂತ ಹೆಚ್ಚಾದದ್ದನ್ನು ಇಲ್ಲವೇ ಕಡಿಮೆಯಾದದ್ದನ್ನು ನಿಮಗೆ ಹೇಳುತ್ತಿರಲಿಲ್ಲ. ಆತನ ಸಂದೇಶವು ನಿಮಗೆ ಕೊಡಲ್ಪಟ್ಟಿದೆ. ನೀವು ಅದನ್ನು ಆಲಿಸುವಿರೋ? ಮತ್ತು ಅದಕ್ಕೆ ವಿಧೇಯರಾಗುವಿರೋ?

© 2009 Truth for Today